ಜನತಾ ಮನೆಗಳ ಮಂಜೂರಿ ಕುರಿತಂ.

೧೫೦೪. ಶ್ರೀ ಬಿ. ಜಿ. ಜವಳಿಂಡಿ (ಮಾಂದ್ವೋಳ)— ಮಾನ್ಯ ಸಾರಿಗೆ ಹಾಗೂ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಿಟ್ಟು ಉತ್ತರಿಸುವರೆ ?

ಅ) ೧೯೮೪-೮೫ ಹಾಗೂ ೧೯೮೫-೮೬ ರಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಹೆಂಡ್ಕೋ ಯೋಜನೆಯನ್ವಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಅಧಿವಾ ಜಾತಿಗಳ ಜನಾಂಗಕ್ಕೆ ಎಷ್ಟು ಜನತಾ ಮನೆಗಳನ್ನು ಮಂಜೂರು ಮಾಡಲಾಗಿದೆ,

ಆ) ಆ ಪೈಕಿ ಮುದ್ದೋಳ ತಾಲ್ಲೂಕಿನಲ್ಲಿ ಮಂಜೂರಾದ ಮನೆಗಳ ಸಂಖ್ಯೆ ಎಷ್ಟು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಸಾರಿಗೆ ಸಚಿವರು).—

	೧೯೮೪—೮೫	೧೯೮೫—೮೬
ಅ)	೧೯೮೦	೧೬೪೬
ಆ)	೧೬೨	೧೨೮

ಶ್ರೀ ಬಿ. ಜಿ. ಜವಳಿಂಡಿ.— ಮಾನ್ಯ ಅಧ್ಯಕ್ಷರೇ, ೧೯೮೪-೮೫ ಮತ್ತು ೧೯೮೫-೮೬ನೇ ಸಾಲುಗಳಲ್ಲಿ ಜಿಲ್ಲಾವಾರು ವಿವರ ನೋಡಿದಾಗ, ಮುದ್ದೋಳ ಕ್ಷೇತ್ರದಲ್ಲಿ, ಹರಿಜನ ಗಿರಿಜನರಿಗೆ ಹೆಂಡ್ಕೋ ಯೋಜನೆಯಲ್ಲಿ ಕೊಟ್ಟಂಥ ಜನತಾ ಮನೆಗಳ ಪ್ರಮಾಣ ಕಡಿಮೆಯಾಗಿದೆ. ನಿವೇಶನ ರಹಿತರಿಗೆ ಜನತಾ ಮನೆಗಳನ್ನು ಕೊಡುವುದರಲ್ಲಿ ನಿರ್ಲಕ್ಷ್ಯವಾಗಿದೆ. ಈ ರೀತಿ ತಾರತಮ್ಯ ಏಕೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಅಧ್ಯಕ್ಷರೇ, ಜನತಾ ಮನೆಗಳನ್ನು ಕೊಡುವುದರಲ್ಲಿ ಯಾವುದೇ ರೀತಿಯ ತಾರತಮ್ಯ ಆಗಿಲ್ಲ. ೧೯೮೪-೮೫ ರ ೨,೯೦೦ ಮನೆಗಳನ್ನು ಬಿಜಾಪುರ ಜಿಲ್ಲೆಗೆ ಮಂಜೂರಾಡಿದ್ದೇವೆ. ಇದರಲ್ಲಿ ೧೯೮೦ ಮನೆಗಳನ್ನು ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗದವರಿಗೆ ಮಂಜೂರಾಡಿದ್ದೇವೆ. ೧೯೮೫-೮೬ನೇ ಸಾಲಿನಲ್ಲಿ ೩,೩೧೫ ಮನೆಗಳನ್ನು ಮಂಜೂರಾಡಿದ್ದೇವೆ. ಇದರಲ್ಲಿ ೧೬೪೬ ಮನೆಗಳನ್ನು ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗದವರಿಗೆ ಮೀಸಲಿಟ್ಟಿದ್ದೇವೆ. ಆದ್ದರಿಂದ ಇದರಲ್ಲಿ ಯಾವುದೇ ರೀತಿಯ ತಾರತಮ್ಯ ಮಾಡಿಲ್ಲ.

ಆರ್.ಟಿ.ಬಿ. ಕಟ್ಟಡ ಉಡುಪಿ

೧೦೯೦. ಶ್ರೀಮತಿ ಮನೋರಮಾ ಮಾಧ್ವರಾಜ್ (ಉಡುಪಿ).— ಮಾನ್ಯ ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉಡುಪಿಯಲ್ಲಿ ಈಗಿರುವ ಪ್ರಾದೇಶಿಕ ಸಾರಿಗೆ ಕಛೇರಿಯು ಬಾಡಿಗೆಯಿಂದು ಮತ್ತು ಚಿಕ್ಕ ದಾಗಿರುವುದರಿಂದ ಸರ್ಕಾರವು ವಿಶಾಲವಾದ ಕಟ್ಟಡವನ್ನು ಒದಗಿಸುತ್ತದೆಯೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಸಾರಿಗೆ ಹಾಗೂ ವಸತಿ ರಾಜ್ಯ ಸಚಿವರು).—

ಆ) ಹೌದು.

ಶ್ರೀಮತಿ ಮನೋರಮ ಮಾಧ್ವರಾಜ್.— ಮಾನ್ಯ ಅಧ್ಯಕ್ಷರೇ, ವಿಶಾಲ ಕಟ್ಟಡವನ್ನು ಯಾವಾಗ ಒದಗಿಸಲಾತ್ತಾರೆ. ಎಂಬ ಬಗ್ಗೆ ನಿರ್ದಿಷ್ಟವಾದ ಸಮಯವನ್ನು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ.— ಉಡುಪಿಯಲ್ಲಿ ಇರತಕ್ಕಂಥ ಆರ್. ಟಿ. ಒ. ಆಫೀಸ್ ಒಂದು ಸಣ್ಣ ಜಾಗದಲ್ಲಿದೆ ಎಂದು ನನಗೆ ತಿಳಿದು ಬಂದಿದೆ. ಇತ್ತೀಚೆಗೆ ವಾನಂ ಉಡುಪಿಗೆ ಹೋಗಿದ್ದಾಗ ನೋಡಿಕೊಂಡು ಬಂದಿದ್ದೇನೆ. ತಾತ್ಕಾಲಿಕವಾಗಿ ಒಂದು ದೊಡ್ಡ ಬಿಲ್ಡಿಂಗ್‌ನ್ನು ಬಾಡಿಗೆಗೆ ತೆಗೆದು ಕೊಂಡು ಅಲ್ಲಿಗೆ ಷಿಫ್ಟ್ ಮಾಡಿ ಎಂದು ಸಂಬಂಧಪಟ್ಟ ಅಧಿಕಾರಿಗೆ ಆದೇಶ ಕೊಟ್ಟಿದ್ದೇನೆ. ಈ ಕಛೇರಿಗೆ ಜಾಗ ಕೊಡಬೇಕೆಂದು ಅಲ್ಲಿನ ಮುನಿಸಿಪಾಲಿಟಿಯವರಿಗೂ ತಿಳಿಸಿದ್ದೇನೆ. ಅಲ್ಲಿಂದ ನನಗೆ ಇನ್ನೂ ಏನೂ ಉತ್ತರ ಬಂದಿಲ್ಲ. ಈ ವರ್ಷ ಅಥವಾ ಮುಂದಿನ ವರ್ಷ ಹೊಸ ಕಟ್ಟಡ ಕಟ್ಟಿಸಿಕೊಡುತ್ತೇವೆ.

ಚುಕ್ಕೆ ಪ್ರಶ್ನೆ. ೫೩೨. (೧೫೮೫) ಮಾನ್ಯ ಸದಸ್ಯರು ಗೈರು ಹಾಜರು